ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ

ಸಂಖ್ಯೆ: ಪಪೂಶಿಇ/ರಾಸೇಯೋ/ವಿ.ಶಿ./58/2016–17 ದಿನಾಂಕ: 20.12.2016

**ಜ್ಞಾಪನ**

ವಿಷಯ: ದಿನಾಂಕ: 04–01–2017 ರಿಂದ 06–01–2017 ರ ವರೆಗೆ ನಡೆಯಲಿರುವ ರಾಜ್ಯ ಮಟ್ಟದ ಬಾಲಕಿಯರ ನಾಯಕತ್ವ ಶಿಬಿರಕ್ಕೆ ವಿದ್ಯಾರ್ಥಿಗಳನ್ನು ನಿಯೋಜಿಸುವ ಬಗ್ಗೆ.

ಪದವಿಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಮತ್ತು **ಸರ್ಕಾರಿ ಪದವಿ ಪೂರ್ವ ಕಾಲೇಜು, ಬಸರಾಳು, ಮಂಡ್ಯ ಜಿಲ್ಲೆ.** ಇವರ ಸಂಯುಕ್ತ ಆಶ್ರಯದಲ್ಲಿ **'ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆಗಾಗಿ ವಿದ್ಯಾರ್ಥಿಗಳು'** ಎಂಬ ಧ್ಯೇಯದೊಂದಿಗೆ ರಾಜ್ಯ ಮಟ್ಟದ ಬಾಲಕಿಯರ ನಾಯಕತ್ವ ಶಿಬಿರಕ್ಕೆ ತಮ್ಮ ಕಾಲೇಜಿನ ಆರೋಗ್ಯವಂತ ಮತ್ತು ಏಕಪಾತ್ರಾಭಿನಯ, ಭಾವಗೀತೆ, ಜಾನಪದಗೀತೆ, ಆಶುಭಾಷಣ ಸ್ಪರ್ದೆ, ಚರ್ಚಾಸ್ಪರ್ದೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಉತ್ತಮ ವ್ಯಕ್ತಿತ್ವವುಳ್ಳ ಶಿಬಿರದ ನಿಯಮಗಳಿಗೆ ಬದ್ದರಾಗಿರುವ ಇಬ್ಬರು ಬಾಲಕಿಯರನ್ನು ನಿಯೋಜಿಸಲು ಕೋರಲಾಗಿದೆ. ನಿಯೋಜನೆಗೊಂಡ ಬಾಲಕಿಯರ, **ಎಸ್.ಬಿ. ಸಮುದಾಯ ಭವನ ಮಂಡ್ಯ** ಇಲ್ಲಿ ದಿನಾಂಕ 03–01–2017 ಸಂಜೆ ಅಥವಾ 04–01–2017 ರಂದು ಬೆಳಗ್ಗೆ 08.00 ಗಂಟೆಗೆ ವರದಿ ಮಾಡಿಕೊಳ್ಳಲು ಸೂಚಿಸಿದೆ.

**ಶಿಬಿರಾರ್ಥಿಗಳು ಶಿಬಿರಕ್ಕೆ ಆಗಮಿಸುವಾಗ ಈ ಕೆಳಕಂಡ ಸೂಚನೆಗಳನ್ನು ಗಮನಿಸಬೇಕು.**

1. ಶಿಬಿರಕ್ಕೆ ಆಗಮಿಸುವಾಗ ಪ್ರಾಂಶುಪಾಲರಿಂದ ಬಿಡುಗಡೆ ಪತ್ರ ಕಡ್ಡಯವಾಗಿ ತರಬೇಕು. ಇಂಡೆಮ್ನಿಟಿ ಬಾಂಡ್/ತಂದೆ/ತಾಯಿ/ಪೋಷಕರ ಒಪ್ಪಿಗೆ ಪತ್ರ (ಕಡ್ಡಾಯವಾಗಿ ತರಬೇಕು)
2. ಊಟದ ತಟ್ಟೆ, ಲೋಟ, ಲಘು ಹಾಸಿಗೆ ಮತ್ತು ಹೊದಿಕೆ, ಉಡುಪು, ಟಾರ್ಚ ಇತರೆ ವಸ್ತುಗಳನ್ನು ತರಬೇಕು.
3. ಶಿಬಿರಕ್ಕೆ ಆಗಮಿಸುವ ಶಿಬಿರಾರ್ಥಿಗಳ ಪ್ರಯಾಣ ಭತ್ಯೆ ಎನ್.ಎಸ್.ಎಸ್. ದೈನಂದಿನ ಚಟುವಟಿಕೆಯ ಅನುದಾನದಿಂದ ಭರಿಸಲು ಸೂಚಿಸಿದೆ.
4. ಶಿಬಿರದ ನಿಯಮಗಳನ್ನು ಶಿಬಿರಾರ್ಥಿಗಳು ಕಡ್ಡಾಯವಾಗಿ ಪಾಲಿಸಬೇಕು ಮತ್ತು ಬೆಲೆ ಬಾಳುವ ವಸ್ತುಗಳನ್ನು ಶಿಬಿರಕ್ಕೆ ತರಬಾರದು.
5. **ಶಿಬಿರಕ್ಕೆ ಆಗಮಿಸುವಾಗ ಇತ್ತೀಚಿನ 2 ಪಾಸ್‌ಪೋರ್ಟ್ ಭಾವಚಿತ್ರವನ್ನು ತರುವುದು.**

ಸಹಯೋಜನಾಧಿಕಾರಿಗಳು
ಎನ್.ಎಸ್.ಎಸ್. ವಿಭಾಗ
ಪದವಿ ಪೂರ್ವ ಶಿಕ್ಷಣ ಇಲಾಖೆ,
ಬೆಂಗಳೂರು

**ವಿಶೇಷ ಸೂಚನೆ:** ಮಂಡ್ಯದ ಸರ್ಕಾರಿ ಬಸ್ ನಿಲ್ದಾಣದಲ್ಲಿ ಇಳಿದು ಅರ್ಧ ಕಿ.ಮೀ. ದೂರವಿರುವ ಎಸ್.ಬಿ. ಸಮುದಾಯಭವನದ ತಾವರೆಗೆರೆಯ ಹತ್ತಿರ ಬರುವುದು.

**ಮಾಹಿತಿಗಾಗಿ ಸಂಪರ್ಕಿಸಿ:**

1. ಪ್ರಾಂಶುಪಾಲರು ಶ್ರೀ ಚಂದ್ರೇಗೌಡ ಸರ್ಕಾರಿ ಪ.ಪೂ ಕಾಲೇಜು, ಬಸರಾಳು, ಮಂಡ್ಯ ಜಿಲ್ಲೆ
   ಮೊ: 9448794058
2. ಶ್ರೀ ಮನು ಕುಮಾರ್ ಜಿ.ಎನ್. ಕಾರ್ಯಕ್ರಮಾಧಿಕಾರಿಗಳು ಸರ್ಕಾರಿ ಪ.ಪೂ ಕಾಲೇಜು, ಬಸರಾಳು ಮಂಡ್ಯ ಜಿಲ್ಲೆ
   ಮೊ: 9916227312
3. ಶ್ರೀ ಹೆಚ್ ಪುಟ್ಟಸ್ವಾಮಿ ಸಹಾಯಕ ಕಾರ್ಯಕ್ರಮಾಧಿಕಾರಿಗಳು ಸರ್ಕಾರಿ ಪ.ಪೂ. ಕಾಲೇಜು, ಬಸರಾಳು ಮಂಡ್ಯ ಜಿಲ್ಲೆ
   ಮೊ: 9844138698

**ಪ್ರತಿಗಳು**

1. ಸಹಾಯಕ ನಿರ್ದೇಶಕರು ಇ–ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ.